ನಿರ್ಣಯವನ್ನು ಆ ಮೇಲೆಯೇ ಬರೆಯುವುದು. ನಾನು ಹೇಳುವುದೇನೆಂದರೆ, ಆ ಮೆಂಬರ್ಸನ್ನು ಕಂಡು ಭೇಟಿ ಮಾಡಿ, ನಮ್ಮ ನಿಲುವನ್ನು ಕ್ಲಿಯರ್ ಮಾಡಿ, ಈ ರೀತಿಯಲ್ಲಿ ನಿರ್ಣಯವನ್ನು ಮಾಡದ ಹಾಗೆ ನೋಡಿಕೊಳ್ಳುವುದರಲ್ಲಿ ನಿಮ್ಮ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಾವೇರಿ ಬೇಸಿನ್ ರೈತರನ್ನು ಮತ್ತೆ ಮತ್ತೆ ಮಾರಣಹೋಮ ಮಾಡುವಂಥ ಕೆಲಸವನ್ನು ಮಾಡುತ್ತಾ ಇದ್ದೀರಿ. ನಿಮಗೆ ಇನ್ನೂ ಸದ್ಬುದ್ಧಿ ಬಂದಿಲ್ಲ. ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ. ಆದರೆ ವಾಕ್‌ಔಟ್ ಮಾಡುವ ಅಗತ್ಯವಿಲ್ಲ. ಇಲ್ಲಿಯೇ ಇರುತ್ತೇನೆ. ಇನ್ನು ಮುಂದಾದರೂ ಕೂಡ ಬಹಳ ಎಚ್ಚರದಿಂದ ಇರಬೇಕೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಖರ್ಗೆಯವರು ಮತ್ತು ಯಡಿಯೂರಪ್ಪನವರು ಹೊರತರಹದ ಪ್ರತಿಭಟನೆ ಮಾಡಿದ್ದಾರೆ. ಧರಣಿ, ಸಭಾತ್ಯಾಗವನ್ನು ಅವರು ಮಾಡಿಲ್ಲ. ನಮಗೆ ಅದು ಅರ್ಥವಾಗಲೇ ಇಲ್ಲ.

ಉಪಾಧ್ಯಕ್ಷರು : ಕಾವೇರಿ ಚರ್ಚೆಯು ಸಾಕಷ್ಟು ಒಳ್ಳೆಯ ರೀತಿಯಿಂದ ಆಗಿದ್ದು ಅದನ್ನು ಇಲ್ಲಿಗೆ ಮುಕ್ತಾಯಮಾಡೋಣ.

ಗಮನ ಸೆಳೆಯುವ ಸೂಚನೆ

ಮೈಸೂರು ನಗರದಲ್ಲಿ ಸ್ವಂತ ಮನೆ ಹೊಂದಿ ಮತ್ತು ಮಂದಿರ ಯೋಜನೆಯಡಿಯ ಫಲಾನುಭವಿಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಶೋಷಣೆ ಮಾಡುತ್ತಿರುವ ಬಗ್ಗೆ

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮೈಸೂರು ನಗರದಲ್ಲಿ ಸ್ವಂತ ಮನೆ ಹೊಂದಿ ಮತ್ತು ಆಶಾಮಂದಿರ ಯೋಜನೆಯಡಿಯ ಫಲಾನುಭವಿಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಶೋಷಣೆ ಮಾಡುತ್ತಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಯುಡಿ 30 ಎಂಐಬಿ 87 ದಿನಾಂಕ 23-12-1987ರ ಆದೇಶದಂತೆ ಮಂಜೂರಾತಿ ಪಡೆದ ಆಶಾಮಂದಿರದ ಯೋಜನೆಯಡಿ ವಿವಿಧ ವರ್ಗಗಳಿಗೆ ಸೇರಿದ 6500 ಮನೆಗಳನ್ನು ವಿತರಿಸಲು ಕ್ರಮ ಕೈಗೊಂಡಿರುತ್ತಾರೆ. ಈ ಪೈಕಿ ಹೆಬ್ಬಾಳು ಮೊದಲನೇ ಹಂತದಲ್ಲಿ ಸಹಾ ಒಟ್ಟು 921 ಮನೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದ್ದು ದಿನಾಂಕ 16-2-1997 ರ ಪ್ರಾಧಿಕಾರದ ಪ್ರಕಟಣೆಯಂತೆ ವಿವಿಧ ಕಟ್ಟಡಗಳಿಗೆ ಈ ಕೆಳಕಂಡಂತೆ ಧರಗಳನ್ನು ನಿಗಧಿಪಡಿಸಲಾಗಿತ್ತು.

ಕ್ರಮ ಸಂಖ್ಯೆ	ವರ್ಗ	ಕಟ್ಟಡದ ಒಟ್ಟು ಅಳತೆ (ಚ.ಮೀ 1)	ಕಟ್ಟಡದ ಒಟ್ಟು ಬೆಲೆ ರೂ.
1)	ಇಡಬ್ಲ್ಯೂಎಸ್-1	20x30 ನಿವೇಶನ	6,000-00
2)	-ಅದೇ-2	20.00 ಚ.ಮೀ	15,000-00
3)	ಎಲ್ಐಜಿ -1	25.00 ಚ.ಮೀ	20,000-00
4)	ಎಲ್.ಐ.ಜಿ.-2	30.00 ಚ.ಮೀ	30,000-00
5)	ಎಂ.ಐ.ಜಿ-1	45,00 ಚ.ಮೀ	60,000-00
6)	ಎಂ.ಐ.ಜಿ.-2	60.00 ಚ.ಮೀ.	1,00,000-00
7)	ಹೆಚ್.ಐ.ಜಿ.-ಎ	180.00 ಚ.ಮೀ.	2,50,000-00
8)	ಹೆಚ್.ಐ.ಜಿ -ಬಿ	115.94 ಚ.ಮೀ.	2,50,000-00

ಮೇಲ್ಕಂಡ ಪ್ರಕಟಿತ ಬೆಲೆಯನ್ನು ಪ್ರಕಟಣೆಯಲ್ಲಿ ಪ್ರಚುರಪಡಿಸಲಾಗಿದ್ದರೂ ಸದರಿ ಪ್ರಕಟಣೆಯಲ್ಲಿ ಮನೆಗಳ ವಿಸ್ತೀರ್ಣ ಮತ್ತು ಬೆಲೆ ಕೇವಲ ಅಂದಾಜು ಮಾತ್ರ ಕಟ್ಟಡ ಪೂರ್ಣಗೊಳಿಸಿದ ನಂತರ ಒಟ್ಟು ಬೆಲೆಯಲ್ಲಿ ವ್ಯತ್ಯಾಸ ಆಗಬಹುದು ಎಂದು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ.

ಹೆಬ್ಬಾಳು ಮೊದಲನೇ ಹಂತದಲ್ಲಿ ವಿತರಣೆಗೆ ಪ್ರಚುರಪಡಿಸಿದ್ದ 921 ಮನೆಗಳ ಬಾಬ್ತು ಯೋಜನೆಯ ಅಂದಾಜು ವೆಚ್ಚ ರೂ. 2.30 ಕೋಟಿಗಳಾಗಿತ್ತು. ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಕಾನೂನು ರೀತಿ ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನಲ್ಲಿ ಬೆಲೆಯು ಶೇ. 15ರಷ್ಟು ಹೆಚ್ಚಾಗಿದ್ದು, ಟೆಂಡರ್ ಮೇರೆಗೆ ಈ ಯೋಜನೆಗೆ ಒಟ್ಟು 3.65 ಕೋಟಿ ರೂ.ಗಳು ವೆಚ್ಚವಾಗಬೇಕಾಗಿತ್ತು. ಆದರೆ ಈ ಯೋಜನೆಗೆ ಅಂತಿಮವಾಗಿ ಒಟ್ಟು 7.25 ಕೋಟಿ ರೂ.ಗಳು ವೆಚ್ಚವಾಗಿರುತ್ತದೆ.

ಆದರೆ ಪ್ರಕಟಿತ ಬೆಲೆಯನ್ನು ನಿಗಧಿಪಡಿಸುವಾಗ ಸಿವಿಲ್ ಕಾಮಗಾರಿ ವೆಚ್ಚ ಮೇಲ್ವಿಚಾರಣಾ ವೆಚ್ಚ ಶೇ. 10, ಬಡ್ಡಿ ಮತ್ತು ನಿವೇಶನ ರಚನೆಯ ವೆಚ್ಚವನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಮನೆಗಳ ಅಂದಾಜು ಬೆಲೆಯನ್ನು ನಿಗಧಿಪಡಿಸಲಾಗಿತ್ತು.

ವಾಸ್ತವಿಕವಾಗಿ ಮನೆಗಳ ಬೆಲೆಗಳನ್ನು ನಿಗದಿಪಡಿಸುವಾಗ ಮೇಲ್ಕಂಡ ವಿಷಯಗಳು ಅಲ್ಲದೆ ಒಳಚರಂಡಿ ಮತ್ತು ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ, ಇ.ಟಿ.ಪಿ. ಶೇಕಡ ಹದಿನೇಳೂವರೆ ಸಾಮಗ್ರಿಗಳ ಜೋಡಣಾ ವೆಚ್ಚ ಸಿಮೆಂಟಿನ ಬಾಬ್ತು, ಹೆಚ್ಚಿಸಿರುವ ಬೆಲೆ, ಕೊಳಚೆ ನಿರ್ಮೂಲನಾ ಅಭಿವೃದ್ಧಿ ಶುಲ್ಕ ಮತ್ತು ನೀರಿನ ಸೆಸ್ ಶೇಕಡ ಎರಡೂವರೆ ಸೇರಿಸಿ ಅಂತಿಮ ಬೆಲೆ ನಿಗದಿಪಡಿಸಬೇಕಾಗುತ್ತದೆ. ನಿಯಮಗಳ ಪ್ರಕಾರ ಈ ಎಲ್ಲಾ ವೆಚ್ಚಗಳನ್ನು ಸೇರಿಸಿದ ನಂತರ ಈ ಕೆಳಕಂಡಂತೆ ಅಂತಿಮ ಬೆಲೆ ನಿಗಧಿಪಡಿಸಲಾಗಿದೆ.

1.	ಇ.ಡಬ್ಲ್ಯೂ.ಎಸ್-1 (ನಿವೇಶನ ಮಾತ್ರ)	6,000-00
2.	ಇ.ಡಬ್ಲ್ಯೂ.ಎಸ್-2	38,000-00
3.	ಎಲ್.ಐ.ಜಿ -1	48,300-00
4.	ಎಲ್.ಐ.ಜಿ-2	65,100-00
5.	ಎಂ.ಐ.ಜಿ-1	1,22,800-00
6.	ಎಂ.ಐ.ಜಿ-2	1,53,900-00
7.	ಹೆಚ್.ಐ.ಜಿ.-ಎ	3,55,700-00
8.	ಹೆಚ್.ಐ.ಜಿ.-ಬಿ	2,92,500-00

ಸಾರ್ವಜನಿಕರಿಗೆ ಎಲ್ಲಾ ಮೂಲಭೂತ ವ್ಯವಸ್ಥೆಯನ್ನು ಒದಗಿಸಿಕೊಡುವ ಉದ್ದೇಶದಿಂದ ಈ ಎಲ್ಲಾ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಸೇರಿಸಿ ಅಂತಿಮ ಬೆಲೆ ನಿಗದಿಪಡಿಸಲಾಗಿದೆ. ಪ್ರಕಟಿತ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಕಾನೂನು ರೀತ್ಯಾ ನಿಗದಿಪಡಿಸಿ ಸದರಿ ದರವನ್ನು ವಸೂಲಿ ಮಾಡಲು ನೋಟೀಸ್ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಕಾನೂನು ಬಾಹಿರವಾಗಿ ಯಾವುದೇ ವಸೂಲಿ ಕ್ರಮವನ್ನು ಕೈಗೊಂಡಿರುವುದಿಲ್ಲ.

+ ಶ್ರೀ ಎ. ರಾಮದಾಸ್ : ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಅಧಿವೇಶನದಲ್ಲಿ ಈ ಪ್ರಶ್ನೆ ಬಂದಾಗ ಉತ್ತರವನ್ನು ಕೊಡುವ ಸಮಯದಲ್ಲಿ ಸನ್ಮಾನ್ಯ ಸಚಿವರು ಹೇಳಿದರು, ಸಂಪೂರ್ಣವಾದ ಮಾಹಿತಿ ಇಲ್ಲದೇ ಇರುವ ದೃಷ್ಟಿಯಿಂದ ಇದನ್ನು ಮುಂದೆ ತೆಗೆದುಕೊಳ್ಳುತ್ತೇವೆಂದು. ಇವತ್ತಿಗೂ ಕೂಡ ಕಳೆದ ಬಾರಿ ಕೊಟ್ಟ ಉತ್ತರವನ್ನು ಬಿಟ್ಟು ಬೇರೆ ಏನೂ ಕೊಡಲಿಲ್ಲ. ಅಂದರೆ, ಮೈಸೂರು ನಗರದಲ್ಲಿ ಈ ಎರಡು ಯೋಜನೆಗಳಲ್ಲಿ ಆಗಿರುವಂತಹ ಅವ್ಯವಹಾರಗಳ ಬಗ್ಗೆ ಸನ್ಮಾನ್ಯ ಸಚಿವರಿಗೆ ಸರ್ಕಾರದ ಅಧಿಕಾರಿಗಳು ಪೂರ್ಣ ಮಾಹಿತಿ ಕೊಟ್ಟಿಲ್ಲ.

ಉಪಾಧ್ಯಕ್ಷರು : ಭಾಷಣ ಮಾಡಬೇಡಿ. ಕ್ಲಾರಿಫಿಕೇಷನ್ ಕೇಳಿ. ಹೋದ ಸಾರಿ ಹಾಗಾಯಿತು, ಈ ಸಾರಿ ಹೀಗಾಯಿತು ಎಂದು ಹೇಳುವ ಹಾಗಿಲ್ಲ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎ. ರಾಮದಾಸ್ : ಇಲ್ಲಿ ಕೊಟ್ಟಿರುವುದು ಕೇವಲ 20 ಕೋಟಿ ರೂಪಾಯಿಗಳ ವ್ಯವಹಾರ ಮಾತ್ರ. ಆದರೆ ಇಡೀ ಮೈಸೂರು ನಗರದಲ್ಲಿ ಈ ಯೋಜನೆಯಲ್ಲಿ ನಡೆದಿರುವುದು 90 ಕೋಟಿ ರೂಪಾಯಿಗಳ ವ್ಯವಹಾರ. 90 ಕೋಟಿ ರೂಪಾಯಿಗಳಲ್ಲಿ 50 ಕೋಟಿ ರೂಪಾಯಿಗಳು ಅಕ್ರಮ ನಡೆದಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲಿ ಕೊಟ್ಟಿಲ್ಲ. ಪ್ರಮುಖವಾಗಿ 6,500 ಮನೆಗಳನ್ನು ಕೈಗೆತ್ತಿಕೊಂಡಿದ್ದು, ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ ಆಗ ಅವರು ಕೈಗೆತ್ತಿಕೊಂಡು ಅದರ ಅಂದಾಜು 20 ಕೋಟಿ ರೂಪಾಯಿಗಳು ಎಂದು ಮಾಡಿದ್ದರು. ಆ ನಂತರದಲ್ಲಿ ಕಾಂಗ್ರೆಸ್ ಹೋಗುವ ಸಮಯದಲ್ಲಿ ಇದರ ಅಂದಾಜು 30 ಕೋಟಿ ಮಾಡಲಾಗಿತ್ತು. ಈಗ ಅಂತಿಮ ಬೆಲೆಯನ್ನು ಜನತಾದಳ

ಸರ್ಕಾರದವರು ಬಂದ ನಂತರ 50 ಕೋಟಿ ಎಂದು ಮಾಡಿ ಜನಗಳ ಮೇಲೆ ನೋಟೀಸ್ ಕೊಡುವ ಪ್ರಯತ್ನ ನಡೆಯುತ್ತಿದೆ. ಇದು ಮೊದಲನೆಯದು. ಎರಡನೆಯದು ಸ್ವಂತ ಮನೆ ಹೊಂದ ಯೋಜನೆ ಎಂದು ಹೇಳಿದರು, ಇದಕ್ಕೆ ಉತ್ತರ ಎಲ್ಲಿಯೂ ಇಲ್ಲ. ಇದರ ಬಗ್ಗೆ ನಾನು ಹೇಳುತ್ತಿದ್ದೇನೆ, ಸ್ವಂತ ಮನೆ ಯೋಜನೆ ಅಡಿಯಲ್ಲಿ 1,258 ಮನೆಗಳು ನಿರ್ಮಾಣ ಮಾಡಲಾಯಿತು.

(ಗೊಂದಲ)

ಉಪಾಧ್ಯಕ್ಷರು : ಅವರು ಎಲೆಕ್ಷನ್ ಭಾಷಣ ಮಾಡುತ್ತಿದ್ದಾರೆ. ಮಾನ್ಯ ಶಂಕರಲಿಂಗೇಗೌಡರು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ. ರಾಮದಾಸ್ : ಭಾಷಣ ಅಲ್ಲ, ನಮ್ಮ ಪ್ರಶ್ನೆ ಸಂಕ್ಷಿಪ್ತವಾಗಿದೆ.

ಉಪಾಧ್ಯಕ್ಷರು : ಹೇಳುವುದಕ್ಕೆ ಅವಕಾಶ ಇದೆ, ಉದ್ದಕ್ಕೆ ಭಾಷಣ ಮಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಏನು ಹೇಳುತ್ತಿದ್ದಾರೆ, ತಾವೇ ನಮಗೆ ಉತ್ತರ ಕೊಡಿಸಿದರೆ ಸಾಕು.

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಉತ್ತರ ಕೊಡುತ್ತೇನೆ, ಕೇಳಲಿ. ಸುಮ್ಮನೆ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳುತ್ತಿರುವುದು ಇಷ್ಟೆ. ಸ್ವಂತ ಮನೆ ಹೊಂದಿ ಮತ್ತು ಆಶಾ ಮಂದಿರ ಯೋಜನೆಯಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ 20 ಕೋಟಿ ಇತ್ತು, ಇದು 50 ಕೋಟಿಯಾಗಿದೆ. ಆ ಭಾರ ಬಡವರ ಮೇಲೆ ಹೊರೆ ಬೀಳುತ್ತಿದೆ. ಇದು ಸರಿಯಲ್ಲ. ನಿಮ್ಮ ತಪ್ಪಿಗೆ ಅವನಿಗೆ ಏಕೆ ಬರೆ ಎಳೆಯುತ್ತೀರಿ ಎಂಬುದು ಅವರ ಪ್ರಶ್ನೆ. ಅದಕ್ಕೆ ಉತ್ತರ ಕೊಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಉಪಾಧ್ಯಕ್ಷರೆ, ಆಶಾ ಮಂದಿರ ಮತ್ತು ಸ್ವಂತ ಮನೆ ಹೊಂದುವ ಯೋಜನೆ 1987ರಲ್ಲಿ ಮೈಸೂರಿನಲ್ಲಿ ಬಂದಿತ್ತು. ಅದರಲ್ಲಿ ಮೊದಲು ಹುಡ್ಕೋ ಮನೆಗಳು ಮೈಸೂರಿನಲ್ಲಿ ಮೂರು ಕ್ಯಾಟಗರಿಯಲ್ಲಿ ಸುಮಾರು 2,513 ಮನೆಗಳು ಇದ್ದವು. ಅದು ಆದ ನಂತರ 1987ರಲ್ಲಿ ಏನು ಹುಡ್ಕೋ ನೆರವು ತೆಗೆದುಕೊಂಡು ಅಪ್ರೂವಲ್ ಆದ ಮನೆಗಳು 6,500. ಸರ್ಕಾರ ಅಪ್ರೂವ್ ಮಾಡಿದ ಒಟ್ಟು ಮನೆಗಳು ಅದರಲ್ಲಿ ಹೆಬ್ಬಾಳದಲ್ಲಿ ಮತ್ತು ಕ್ಯಾತಮಾರನಹಳ್ಳಿ 1,2,3, ಮತ್ತು 4ನೇ ಹಂತ. ದೇವನೂರಲ್ಲಿ ಆದಂಥದ್ದು ಮತ್ತು ಬೋಗಾದಿಯಲ್ಲಿ ಆದಂಥದ್ದು ಎಲ್ಲಾ ಇದೆ. ಈ ಮೂವರು ಜನರೂ ಶ್ರೀ ಇ. ಮಾರುತಿರಾವ್ ಪವಾರ್, ಶ್ರೀ ಎಚ್.ಎಸ್. ಶಂಕರಲಿಂಗೇಗೌಡ ಮತ್ತು ಶ್ರೀ ಎ. ರಾಮದಾಸ್‌ರವರು ಮೂರು ಅದರಲ್ಲಿ ಸದಸ್ಯರಾಗಿರತಕ್ಕಂಥವರು. ಇದರಲ್ಲಿ ಕಟ್ಟಿರತಕ್ಕಂತಹ ಮನೆಗಳು 5,757 ಸ್ವಾಧೀನಕ್ಕೆ ಕೊಟ್ಟಿರುವ ಮನೆಗಳು 3,338. ಇದರಲ್ಲಿ ಎಕನಾಮಿಕಲಿ ವೀಕರ್ ಸೆಕ್ಷನ್‌ನಲ್ಲಿ ಎಲ್‌ಐಜಿ, ಎಮ್‌ಐಜಿ, ಮತ್ತು ಹೆಚ್‌ಐಜಿ ಎಂದು ಕೆಟಗರಿ ಮಾಡಿಕೊಂಡು ಕೊಟ್ಟಿರತಕ್ಕಂಥದ್ದು. ಅದರಲ್ಲಿ ಕೆಲವು ಮನೆಗಳು ಅಪೂರ್ಣಗೊಂಡಿವೆ. ಅಪೂರ್ಣವಾದಂತಹ

ಮನೆಗಳಿಗೆ ಕ್ಯಾತಮಾರನಹಳ್ಳಿಯಲ್ಲಿ740, ಮತ್ತು ಬೊಗಾದಿಯಲ್ಲಿ914. ಇದರಲ್ಲಿ1,514 ಮನೆಗಳು ಅಪೂರ್ಣಗೊಂಡಂಥದ್ದು. ಈ ಮನೆಗಳನ್ನು ಯಾವ ಹಂತದಲ್ಲಿವೆ ಅದನ್ನೇ ಕೊಡಬೇಕೆಂದು ಈಗಾಗಲೇ ಮೂಡಾದವರು ಇವರೂ ಸೇರಿ ಅದರ ಸದಸ್ಯರಾದ ಇವರೂ ಸೇರಿ ತೀರ್ಮಾನ ತೆಗೆದುಕೊಂಡು ಅದರ ವ್ಯಾಲ್ಯುಯೇಷನ್‌ಗೆ ಆಗಬೇಕೆಂದು, ತೀರ್ಮಾನವಾಗಿ ಈಗ ವ್ಯಾಲ್ಯುಯೇಷನ್‌ಗೆ ಇರತಕ್ಕಂಥದ್ದು. ಅದರಲ್ಲಿ ಹುಡ್ಕೋ ನೆರವು ಒಟ್ಟಿಗೆ 5,757 ಮನೆಗಳಿಗೆ ಕೊಟ್ಟಿರತಕ್ಕಂಥದ್ದು. ಆ ಅಗ್ರಿಮೆಂಟ್ ಪ್ರಕಾರ 20 ಕೋಟಿ, 70 ಲಕ್ಷದ 60,000 ರೂ. ಒಪ್ಪಂದ ಆಗಿದ್ದು ಅಷ್ಟು ಹಣ. ಅವರಿಂದ ಬಿಡುಗಡೆ ಆಗಿದ್ದು 17,64 ಲಕ್ಷದ 62,000 ಬಾಕಿ ಮೂರು ಕೋಟಿ ರೂಪಾಯಿ ಬಿಡುಗಡೆ ಆಗ ಬೇಕಾಗಿದೆ. ಅದನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಕಾರಣ ಆ ಕಟ್ಟಡಗಳು ಇನ್ನೂ ಪೂರ್ಣವಾಗಿಲ್ಲ ಎಂದು, ಅಪೂರ್ಣಗೊಂಡಿದ್ದಕ್ಕೆ 3 ಕೋಟಿ ರೂಪಾಯಿ ಬಿಡುಗಡೆ ಆಗಿಲ್ಲ. ಪ್ರಾಧಿಕಾರ ಖರ್ಚು ಮಾಡಿರತಕ್ಕದ್ದು 18 ಕೋಟಿ 27 ಲಕ್ಷ ಪ್ರಾಧಿಕಾರದ ಹಣವನ್ನು ಅದಕ್ಕೆ ತುಂಬಿ ಮುಗಿಸಿರುವ ಯೋಜನೆ ಇದಾಗಿದೆ. ಆಶಾಮಂದಿರದ ಎಲ್ಲಾ ಕಟ್ಟಡಗಳಿಗೆ ಒಟ್ಟು ಖರ್ಚಾಗಿರತಕ್ಕದ್ದು 35 ಕೋಟಿ 87 ಲಕ್ಷ. 41 ಸಾವಿರ. ಇದರಲ್ಲಿ 50 ಕೋಟಿಯಾಗಿದೆ, ಕೋಟ್ಯಾಂತರ ಅವ್ಯವಹಾರವಾಗಿದೆಯೆಂದು ಇವರು ಹೇಳುತ್ತಾರೆ. ಆದರೆ ಅಲ್ಲಿ ಇವರುಗಳೇ ಸದಸ್ಯರಾಗಿದ್ದಾರೆ. ಇವರುಗಳೇ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ, ಇವರುಗಳೇ ಕೊಟ್ಟಿರತಕ್ಕ ಬೆಲೆ ಇದು.

ಶ್ರೀ ಹೆಚ್.ಸಿ. ಶಂಕರಲಿಂಗೇಗೌಡ : ಅವರು ಹೇಳುತ್ತಿರುವ ಉತ್ತರ ಸುಳ್ಳು. ಇವರುಗಳೇ ಒಪ್ಪಿಕೊಂಡಿದ್ದಾರೆಂದು ಉತ್ತರ ಕೊಟ್ಟರೆ ಹೇಗೆ? ಆ ಮನೆಗಳಲ್ಲಿ ಮನುಷ್ಯ ಬದುಕಲು ಸಾಧ್ಯವಿಲ್ಲ, ಪ್ರಾಣಿಗಳು ಮಾತ್ರ ಇರಬಹುದು, ಬೇಕಾದರೆ ಸದನ ಸಮಿತಿ ಮಾಡಿ ಪರಿಶೀಲನೆ ಮಾಡಿ. ನಾವೇ ಅಲ್ಲಿ ಸದಸ್ಯರಾಗಿ ಒಪ್ಪಿಕೊಂಡಿದ್ದೇವೆಂದು ಅವರು ಉತ್ತರದಲ್ಲಿ ಹೇಳಿ ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಅವರ ಹೇಳಿಕೆಯನ್ನು ವಿರೋಧಿಸಿ ನಾನು ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರು ಬಾವಿಯಲ್ಲಿ ಬಂದು ಕುಳಿತರು)

ಉಪಾಧ್ಯಕ್ಷರು : ಮಾನ್ಯ ಮಂತ್ರಿಯವರು ಸರಿಯಾಗಿ ಉತ್ತರವನ್ನು ಹೇಳುತ್ತಿರುವಾಗ ಅದನ್ನು ಕೇಳುವ ಸೌಜನ್ಯ ಅವರಿಗಿಲ್ಲವಲ್ಲಾ, ಇದು ಸರಿಯಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಫಲಾನುಭವಿಗಳಿಂದ ಬಂದಿರತಕ್ಕ ಹಣ 14 ಕೋಟಿ 75 ಲಕ್ಷ ನಾವು ಇನ್ನೂ 21 ಕೋಟಿ ಅದಕ್ಕೆ ಹಾಕಿ ಸಂಪೂರ್ಣ ಮಾಡಿದ್ದೇವೆ. ಇವರಿಗೆಲ್ಲಾ ಗೊತ್ತು. ಇವರು ಅಲ್ಲಿ ಸದಸ್ಯರಾಗಿದ್ದಾರೆ. ಹುಡ್ಕೋಗೆ ಬಡ್ಡಿ ಸಮೇತ ಪ್ರಾಧಿಕಾರದಿಂದ 21 ಕೋಟಿ ಕೊಡಲಾಗಿದೆ. ಈ ಯೋಜನೆಯಲ್ಲಿ ಈಗಾಗಲೇ 25 ಕೋಟಿ ನಷ್ಟವಾಗಿದೆ. ಇದು ನಮ್ಮ ಕಾಲದಲ್ಲಿ ಆದ ಯೋಜನೆಯಲ್ಲ. 1987ರಲ್ಲಿ ಯೋಜನೆ ರೂಪಿಸಿದರು, 1989ರಲ್ಲಿ ಆಯಿತು, ಬಿ.ಡಿ. ರೆಡ್ಡಿ ಎಂಬುವವರಿಗೆ ಗುತ್ತಿಗೆ ಕೊಟ್ಟರು, 92ರಲ್ಲಿ ಮುಗಿಸಿದರು. ಮುಗಿಸಿದಮೇಲೆ ಬೆಲೆಯಲ್ಲಿ ವ್ಯತ್ಯಾಸವಾಯಿತು. ಮಾನ್ಯ ಶಂಕರಲಿಂಗೇಗೌಡರು, ಪವಾರ್‌ರವರು, ರಾಮದಾಸ್‌ರವರು ಪ್ರಾಧಿಕಾರದ ಸಭೆಯಲ್ಲಿ ಕುಳಿತುಕೊಂಡೇ ಒಂದು ತೀರ್ಮಾನ ತೆಗೆದುಕೊಂಡರು. ಹೆಚ್ಚು ದರಕ್ಕೆ ಹಣವನ್ನು ವಸೂಲಿ ಮಾಡಬೇಕೆಂದು

ತೀರ್ಮಾನ ತೆಗೆದುಕೊಂಡರು. ಅನಂತರ ಅವರುಗಳು ಹೊರಕ್ಕೆ ಬಂದರು. ಹೆಬ್ಬಾಳದಲ್ಲಿ ವಿವಿಧ ಹಂತದಲ್ಲಿ 920 ಮನೆಗಳನ್ನು ಮಾಡಿದ್ದೇವೆ. ಹೆಬ್ಬಾಳ ಹುಡ್ಕೋ ಒಂದನೇ ಹಂತದ ಕ್ಷೇಮಾಭಿವೃದ್ಧಿ ಸಂಘವೊಂದನ್ನು ಮಾಡಿಕೊಂಡಿದ್ದಾರೆ. ಸಭೆಯ ತೀರ್ಮಾನದ ನಂತರ ಶಂಕರಲಿಂಗೇಗೌಡರು ಹೊರಕ್ಕೆ ಬಂದಮೇಲೆ ಈ ಸಂಘದವರು ಏನು ತಾವು ಈ ರೀತಿ ಮಾಡಿದ್ದೀರಿ ಎಂದು ಕೇಳಿದಮೇಲೆ ಆ ಸಂಘದಿಂದ ಕೆಲವು ಠರಾವನ್ನು ಮಾಡಿ ಈ ರೀತಿ ಮಾಡಬೇಕೆಂದು ಇದನ್ನು ಕೊಟ್ಟಿದ್ದಾರೆ. 1988ರಲ್ಲಿ ಇ.ಡಬ್ಲ್ಯೂ.ಎಸ್. ಮನೆ 15 ಸಾವಿರ ಎಂದು ತೀರ್ಮಾನವಾಗಿತ್ತು. 1992ರಲ್ಲಿ ಕೆಲಸ ಮುಗಿದಾಗ ಎಸ್.ಆರ್. ರೇಟ್ಸ್‌ನಲ್ಲಿ ಎಸ್ಕಲೇಷನ್ ಆಗಿ 8 ಸಾವಿರ ಹೆಚ್ಚಾಯಿತು. ಅದರ ಬೆಲೆ 23 ಸಾವಿರ ಆಯಿತು. ಅದರಲ್ಲಿ ಹೆಚ್ಚುವರಿಯಾದ ಪರ್‌ಸೆಂಟೇಜ್ 53.5. 1988ರಲ್ಲಿ ಏನು ಮೊದಲು ಪ್ರಕಟಿತ ಬೆಲೆ 15 ಸಾವಿರ ಇತ್ತು. ಅದಕ್ಕೆ ಹೆಚ್ಚುವರಿಯಾಗಿ 8 ಸಾವಿರ ಸೇರಿಸಿ ಅನಂತರ 1997ರಲ್ಲಿ ಅಂತಿಮವಾಗಿ ಮತ್ತೆ 7,800 ರೂಪಾಯಿಗಳನ್ನು ಸೇರಿಸಿ 30,800 ರೂಪಾಯಿ ಎಂದು ನಿಗಧಿ ಮಾಡಲಾಯಿತು. ಇದರಲ್ಲಿ ಯು.ಜಿ.ಡಿ. ವಿದ್ಯುತ್, ನೀರು, ಇ.ಟಿ.ಪಿ. ಚಾರ್ಜಸ್, ಸ್ಲಮ್‌ಸೆಸ್ ಈ ಎಲ್ಲವೂ ಸೇರಿ ಅಂತಿಮವಾಗಿ ಬೆಲೆಯನ್ನು ನಿರ್ಧಾರ ಮಾಡಿದಾಗ ಅದನ್ನು ಕೊಡಲೇಬೇಕೆಂದು ಹೇಳಿಯೇ ಫಲಾನುಭವಿಗಳಿಗೆ ಮನೆಯನ್ನು ಅಲಾಟ್ ಮಾಡಿರುವುದು. ಪ್ರತಿಯೊಂದು ಮನೆಗೂ ಪ್ರಕಟಿತ ಬೆಲೆ ಮತ್ತು ಅಂತಿಮ ಬೆಲೆ ಇದ್ದೇ ಇರುತ್ತದೆ. ಪ್ರಕಟಿತ ಬೆಲೆಯಲ್ಲಿ ಕೇವಲ ನಾಲ್ಕು ಐಟಂನ್ನು ಮಾತ್ರ ತೋರಿಸುತ್ತೇವೆ. ಕಟ್ಟಡಕಟ್ಟುವ ವೆಚ್ಚ, ಸೂಪರ್‌ವಿಷನ್ ಚಾರ್ಜ್ 10ರಷ್ಟು, ಬಂಡವಾಳದ ಮೇಲೆ ಬಡ್ಡಿ 7 ಪರ್‌ಸೆಂಟ್, ನಿವೇಶನ ರಚನೆ ವೆಚ್ಚ ಮುಂತಾದುವುಗಳನ್ನು ಮಾತ್ರ ತೋರಿಸಿರುತ್ತೇವೆ. 1988ರಲ್ಲಿ ಪ್ರಕಟಿತ ಬೆಲೆ ಇದರಲ್ಲಿ 15 ಸಾವಿರ ಇತ್ತು. 1992ರಲ್ಲಿ ಮನೆ ಪೂರ್ಣಗೊಂಡು ಎಸ್.ಆರ್.ರೇಟ್‌ನಲ್ಲಿ ಎಸ್ಕಲೇಷನ್ ಆದಮೇಲೆ 8 ಸಾವಿರ ಜಾಸ್ತಿಯಾಗಿ ಒಟ್ಟು 23 ಸಾವಿರ ಆಗುತ್ತದೆ. ಅನಂತರ 1997ರಲ್ಲಿ ಯು.ಜಿ.ಡಿ, ವಿದ್ಯುತ್, ನೀರು, ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್, ಸ್ಲಮ್ ಸೆಸ್ ಮುಂತಾದವುಗಳನ್ನೆಲ್ಲ ಸೇರಿಸಿದರೆ ಇನ್ನೂ 7,800 ಆಗುತ್ತದೆ. 1992ರದ್ದು ಮತ್ತು 1997ರದ್ದು ಎರಡನ್ನೂ ಸೇರಿಸಿದರೆ ಒಟ್ಟಾರೆ ಹೆಚ್ಚುವರಿ 105.3 ಪರ್‌ಸೆಂಟ್ ಆಗುತ್ತದೆ. ಆದ್ದರಿಂದ ಪ್ರಕಟಿತ ಬೆಲೆ 15 ಸಾವಿರ ಇದ್ದದ್ದು ಅಂತಿಮವಾಗಿ 30,800 ರೂಪಾಯಿಗಳಾಗುತ್ತದೆ. ಹನ್ನೊಂದು ವರ್ಷಗಳ ನಂತರ ಆ ಬೆಲೆಯಾಗುತ್ತದೆ. ಅನಂತರ ಎಲ್.ಐ.ಜಿ, ಎಲ್.ಐ.ಜಿ-2, ಎಮ್.ಐ.ಜಿ., ಹೆಚ್.ಐ.ಜಿ. ಮುಂತಾದ ಮನೆಗಳಿವೆ. ಆಯಾಯ ಮನೆಗಳಿಗೆ ಏನು ಎಸ್.ಆರ್ ರೇಟ್ಸ್ ಇದೆ ಅದರ ಪ್ರಕಾರ ಬೆಲೆಯೂ ಜಾಸ್ತಿಯಾಗಿದೆ. ಇವರುಗಳೂ ಅದರ ಸದಸ್ಯರುಗಳೇ ಈ ಯೋಜನೆಯಿಂದ ನಮಗೆ 25 ಕೋಟಿ ನಷ್ಟವಾಗಿದೆ. ಇದನ್ನು ಇನ್ನೂ ಕಡಿಮೆಗೆ ಮಾಡಿಕೊಡಿ ಎಂದರೆ ನಾವು ಯಾವ ರೀತಿ ಕೊಡಲು ಸಾಧ್ಯ? ಇದು ಸಾಧ್ಯವಾಗುವುದಿಲ್ಲ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏನು ಅವ್ಯವಹಾರ ನಡೆದಿಲ್ಲವೆಂದು ಉತ್ತರ ಕೊಡುವಾಗ ಹೇಳಿದ್ದಾರೆ. 1992ನೇ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ಫಲಾನುಭವಿಗಳಿಗೆ ಕೊಟ್ಟು ಯಾವುದೇ ಹಣ ಬರಬೇಕಾಗಿಲ್ಲ ಎಂದು ತಿಳಿಸಿದ್ದಾರೆ.

ಅದರ ಉದಾಹರಣೆ ಕೊಡುವುದಾದರೆ, ನಿಮಗೆ ಎಂ.ಐ.ಜಿ.-2 ಮನೆಯು ಹೆಬ್ಬಾಳ ಬಡಾವಣೆಯಲ್ಲಿ ಮಂಜೂರಾಗಿದ್ದು ಇದರ ಬಾಬ್ತು ಪೂರ್ತಿ ಹಣ ಬಂದಿದ್ದು ಲೆಕ್ಕಶಾಖೆಯ ಅಭಿಪ್ರಾಯದಂತೆ ಪೂರ್ಣ ಹಣ ಸಂದಾಯವಾಗಿದೆಯೆಂದು ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡಲಾಗಿದೆ. ಸುಮಾರು ಎಂಟು ಸಾವಿರ ಜನರಿಗೆ ಆ ರೀತಿ ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. ಈ ಸರ್ಕಾರ ಬಂದಮೇಲೆ ಅವರೆಲ್ಲರಿಗೂ ಸಹ 30 ಸಾವಿರ ಹಣವನ್ನು ಕಟ್ಟಿ ಎಂದು ನೋಟೀಸ್ ಕೊಟ್ಟಿದ್ದಾರೆ. ಇದರ ಮೊತ್ತ 36 ಕೋಟಿ. ಇಲ್ಲಿ ಅವ್ಯವಹಾರ ಆಗಿಲ್ಲವೆಂದು ಹೇಳಿದರು, ಆದರೆ ಪತ್ರಿಕೆಯಲ್ಲಿ ಬಂದಿರುವ ವಿಚಾರವೇನೆಂದರೆ, ಸ್ವಂತ ಮನೆ ಹೊಂದಿ ಯೋಜನೆಯ ವಿಚಾರಕ್ಕೆ ವಿಷಾದ ವರದಿ ನೀಡಲು ಅರ್ಥ ಸಚಿವರ ಆದೇಶ ಎಂದು ಬಂದಿದೆ. ಅದರಲ್ಲಿ ಅಕ್ರಮ ನಡೆದಿದೆ, ಮಾನ್ಯ ಉಪಮುಖ್ಯಮಂತ್ರಿಯವರು ಮೈಸೂರಿಗೆ ಬಂದಾಗ ಇದರ ಬಗ್ಗೆ ತನಿಖೆ ಮಾಡಲು ಆದೇಶವನ್ನು ಕೊಟ್ಟರು. ಇದುವರೆಗೆ ವಿಚಾರಣೆ ಮಾಡಿ ವರದಿ ಕೊಟ್ಟಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸದಸ್ಯರು ಈ ಕಡತವನ್ನು ತಮ್ಮ ಬಳಿ ತರುತ್ತಾರೆ, ಅವರೊಂದಿಗೆ ಕುಳಿತು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಬರಲಿ, ಮೂಡಾದ ಹಿತದೃಷ್ಟಿಯಿಂದ ಏನು ಬೇಕಾದರೂ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಮತ್ತೆ ಹೊಸದಾಗಿ ಹಣವನ್ನು ಕೊಡಬೇಕೆಂದು ಹೇಳುತ್ತಿರುವುದು ಸರಿಯಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತಾವು ಮಾನ್ಯ ಸಚಿವರಿಗೆ ಆ ಮಾಹಿತಿಯನ್ನೆಲ್ಲಾ ಕೊಟ್ಟು ಚರ್ಚೆ ಮಾಡಿ. ಆಗಲೂ ತಮಗೆ ತೃಪ್ತಿಯಾಗದಿದ್ದರೆ ನ್ಯಾಯಾಂಗ ತನಿಖೆಗೋ, ಮತ್ತೊಂದಕ್ಕೋ ಒತ್ತಾಯ ಮಾಡೋಣ. ಮೂಡಾದ ಮತ್ತು ಫಲಾನುಭವಿಗಳ ಹಿತದೃಷ್ಟಿಯಿಂದ ತಾವು ಮತ್ತು ಸಚಿವರು ಕುಳಿತು ಚರ್ಚೆ ಮಾಡಿ, ಅನಂತರ ಏನಾದರೂ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು: ಇಲ್ಲಿಗೆ ಇದರ ಬಗ್ಗೆ ಚರ್ಚೆ ಮುಕ್ತಾಯವಾಯಿತು. ಈಗ ಪ್ರಕಟಣೆ.

ಪ್ರಕಟಣೆ

ಉಪಾಧ್ಯಕ್ಷರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಮಂಡಳಿಯ ಎರಡು ಸದಸ್ಯ ಸ್ಥಾನಗಳನ್ನು ಭರ್ತಿ ಮಾಡಬೇಕಾಗಿದ್ದು, ಈ ಎರಡೂ ಸ್ಥಾನಗಳ ಸಂಖ್ಯೆಗೆ ಸಮನಾಗಿ ಮಾನ್ಯ ಸದಸ್ಯರುಗಳಿಂದ ನಾಮಪತ್ರಗಳು ಬಂದಿರುವುದರಿಂದ, ವಿಧಾನ ಸಭೆಯಿಂದ ರಾಜ್ಯ ಮುಕ್ತ